ಅ) 1) ಮಳು ಸಾಕಣೆ ಕೊಠಡಿಗಳಲ್ಲಿ ನೈಲಾನ್ ಬಲೆ ಉಪಯೋಗಿಸುವುದು.
2) ಮಳು ಸಾಕುವ ತಟ್ಟೆಗಳನ್ನು ನೈಲಾನ್ ಬಲೆಗಳಿಂದ ಮುಚ್ಚುವುದು.
3) ಮಳು ಸಾಕಣೆ ಮನೆಯ ಕಿಟಕಿ ಬಾಗಿಲುಗಳಿಗೆ ತಂತಿ ಜಾಲರಿ ಅಳವಡಿಸುವುದು.
4) ಊಜಿ ನೊಣದ ಮೆಗಾಟ್ಟಗಳು ಇರತಕ್ಕಂತಹ ಮಳುಗಳನ್ನು ಆಯ್ದು ಸಾಯಿಸುವುದು.
5) ಊಜಿ ಸೈಡ್ ದ್ರಾವಣವನ್ನು ಹುಳುಗಳ ಮೇಲೆ ಸಿಂಪಡಿಸುವುದು.
6) ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಊಜಿ ನೊಣದ ಮೆಗ್ಗಾಟ್‌ಗಳನ್ನು ಸಂಗ್ರಹಿಸಿ ಬಿಸಿ ನೀರಿನಲ್ಲಿ ಸಾಯಿಸುವುದು.

ವಿಷಯ :– ಕರ್ನಾಟಕ ರಾಜ್ಯ ಹಣಕಾಸು ನಿಗಮ ಮಂಡಳಿಯಿಂದ ಸಾಲ ಮಂಜೂರಾತಿ ಪಡೆದ ಅರ್ಜಿದಾರರ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 492 (1104)

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾಗಡಿ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ಕರ್ನಾಟಕ ರಾಜ್ಯ ಹಣಕಾಸು ನಿಗಮ ಮಂಡಳಿಯಿಂದ ಸಾಲ ಮಂಜೂರಾದ ಅರ್ಜಿದಾರರ ಸಂಖ್ಯೆ ಎಷ್ಟು ? ಹಾಗೂ ಮಂಜೂರು ಆಗದೇ ಇರುವ ಅರ್ಜಿದಾರರ ಸಂಖ್ಯೆ ಎಷ್ಟು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಮಾಗಡಿ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಲ್ಲಿ ಕೊಟ್ಟಿರುವ ಸಾಲ ಸೌಲಭ್ಯದ ವಿವರ ಈ ಕೆಳಗಿನಂತಿದೆ :

(ಮೊತ್ತ : ಲಕ್ಷ ರೂ. ಗಳಲ್ಲಿ)

ವರ್ಷ	ಮಂಜೂರಾತಿ ಸಂಖ್ಯೆ	ಮೊತ್ತ
1988–89	1	0.62
1989–90	25	18.54
1990–91 (30–11–1990ರ ವರೆಗೆ)	28	33.11

30–11–1990 ರಲ್ಲಿ ಮಂಜೂರಾತಿಗಾಗಿ ಕಾದಿರುವ ಅರ್ಜಿದಾರರ ಸಂಖ್ಯೆ 6 ಇದ್ದು, ಒಟ್ಟು ಸಾಲ ಅಪೇಕ್ಷಿಸಿರುವ ಮೊತ್ತ 3.55 ಲಕ್ಷ ರೂ.ಗಳು.

ವಿಷಯ :– ವಿಜಯನಗರ ಉಕ್ಕಿನ ಕಾರ್ಖಾನೆ ಪ್ರಾರಂಭಿಸುವ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 493 (681)

ಶ್ರೀ ಶಿವಾನಂದ ಪೆಚ್. ಕೌಜಲಗಿ (ಬೈಲಹೊಂಗಲ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಜಯನಗರ ಉಕ್ಕಿನ ಕಾರ್ಖಾನೆ ಯೋಜನೆಯನ್ನು ತೀವ್ರಗತಿಯಿಂದ ಪ್ರಾರಂಭಿಸಲು ರಾಜ್ಯ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಆ) ಈ ವಿಜಯನಗರ ಉಕ್ಕಿನ ಕಾರ್ಖಾನೆ ಪ್ರಾರಂಭಿಸಲು ಅಡಿಗಲ್ಲನ್ನು ಯಾರು ಯಾವ ವರ್ಷದಲ್ಲಿ ಹಾಕಿದರು ?

ಇ) ಅಡಿಗಲ್ಲನ್ನು ಹಾಕುವ ಕಾಲಕ್ಕೆ ಅಡಳಿತಾತ್ಮಕ ಮಂಜೂರಾತಿಯನ್ನು ಈ ಕೆಲಸಕ್ಕೆ ನೀಡಲಾಗಿತ್ತೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :-

ಅ) ಕೇಂದ್ರ ಸರ್ಕಾರದ ಹೊಸ ನೀತಿಯ ಅನುಸಾರ ಜಂಟೀ ವಲಯದಲ್ಲಿ ವಿಜಯನಗರ ಉಕ್ಕು ಕಾರ್ಖಾನೆಯನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆ. ಈ ಪ್ರಯುಕ್ತ ಆರ್ಹತೆಯುಳ್ಳ ಕೈಗಾರಿಕೋದ್ಯಮಿಗಳಿಂದ ಪ್ರಸ್ತಾವನೆಯನ್ನು ಪತ್ರಿಕಾ ಪ್ರಕಟಣೆ ಹೊರಡಿಸಿದ 10 ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ. ಬಂದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಹೆಚ್ಚು ಆರ್ಹತೆಯುಳ್ಳ ಕೈಗಾರಿಕೋದ್ಯಮಿಗೆ ವಿಜಯನಗರ ಉಕ್ಕು ಕಾರ್ಖಾನೆಯನ್ನು ಜಂಟೀ ವಲಯದಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಜನವರಿ ತಿಂಗಳ 10 ರೊಳಗಾಗಿ ಅರ್ಜಿಯನ್ನು ಸಲ್ಲಿಸಲು ಉದ್ದೇಶಿಸಲಾಗಿದೆ.

ಆ) ಆಂದಿನ ಪ್ರಧಾನ ಮಂತ್ರಿಗಳು 1971 ರಲ್ಲಿ ಅಡಿಗಲ್ಲು ಹಾಕಿದರು.

ಇ) ಇಲ್ಲ.

ವಿಷಯ :- ಶ್ರೀಮತಿ ಸರೋಜಿನಿ ಮಹಿಷಿ ವರದಿ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 494 (952)

ಶ್ರೀ ಶಿವಾನಂದ ಪಟೆ. ಕೌಜಲಗಿ (ಬೈಲಹೊಂಗಲ) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನ್ನಡಿಗರಿಗೆ ಉದ್ಯೋಗಾವಕಾಶ ಒದಗಿಸುವ ಸಲುವಾಗಿ ನೇಮಿಸಿದ ಶ್ರೀಮತಿ ಮಹಿಷಿ ವರದಿಯನ್ನು ಸರ್ಕಾರಕ್ಕೆ ಯಾವಾಗ ಒಪ್ಪಿಸಲಾಯಿತು. ಆ ವರದಿಯನ್ನು ಸರ್ಕಾರದವರು ಒಪ್ಪಿಕೊಂಡಿರುವರೇ

ಆ) ಹಾಗಿದ್ದಲ್ಲಿ ಆ ವರದಿಯನ್ನು ಅನುಷ್ಠಾನಕ್ಕೆ ತರಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :- ...

ಅ) ದಿನಾಂಕ 30-12-1986 ರಂದು ಸಲ್ಲಿಸಿದೆ. ಬಹುಪಾಲು ಶಿಫಾರಸ್ಸುಗಳನ್ನು ಒಪ್ಪಿದೆ.

ಆ) ಸರ್ಕಾರವು ಅಂಗೀಕರಿಸಿದ ಶಿಫಾರಸ್ಸುಗಳನ್ನು ಜಾರಿಗೊಳಿಸುವುದನ್ನು ನೋಡಿಕೊಳ್ಳಲು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಅಧಿಕಾರಿಗಳ ಸಮಿತಿಯನ್ನು ರಚಿಸಿದೆ.

ವಿಷಯ :- ಬೆಳಗಾವಿ ಜಿಲ್ಲೆಯ ಸವದತ್ತಿ - ಬೈಲಹೊಂಗಲ - ಹೊಸೂರು ರಸ್ತೆಯನ್ನು ಕಾರ್‌ಪೇಟಿಂಗ್ ಮಾಡುವ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 495 (951)

ಶ್ರೀ ಶಿವಾನಂದ ಪಟೆ. ಕೌಜಲಗಿ (ಬೈಲಹೊಂಗಲ) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಸವದತ್ತಿ-ಬೈಲಹೊಂಗಲ (ವ್ಹಾಯಾ ಮುನವಳ್ಳಿ-ಹೊಸೂರು) ರಸ್ತೆಯ ಲೋಕೋಪಯೋಗಿ ಇಲಾಖೆ ಕಾರ್ಯಕಾರಿ ಅಭಿಯಂತರರು, ಲೋಕೋಪಯೋಗಿ ಇಲಾಖೆ ನೀರಾವರಿ ಇಲಾಖೆ ಮಲಪ್ರಭಾ ಪ್ರೋಜೆಕ್ಟ್ ನವಿಲುತೀರ್ಥ ಇವರು ಯಾವ ವರ್ಷ ಈ ರಸ್ತೆಗೆ ಖಿಡಿ ಹಾಕಿ ಡಾಂಬರ ಮಾಡಿರುವರು ?

ಆ) ಈ ರಸ್ತೆಯನ್ನು ಖಿಡಿ ಹಾಕಿ ಡಾಂಬರ ಮಾಡಿದ ನಂತರ ಈ ರಸ್ತೆಯ ಮೇಲೆ ಪುನಃರೀಕಾರ್ಪೆಟಿಂಗ್ ಮಾಡಲಾಗಿದೆಯೇ ? ಮಾಡಿದ್ದರೆ ಎಂದು ಮಾಡಲಾಗಿದೆ ?

ಇ) ಈ ರಸ್ತೆಯು ಮಲಪ್ರಭಾ ಸಕ್ಕರೆ ಕಾರ್ಖಾನೆ ಕಮಾಂಡ ಏರಿಯಾದಲ್ಲಿ ಬರುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಈ ರಸ್ತೆಯ ಮೇಲೆ ಪ್ರವಾಸಿ ಕೇಂದ್ರವಾದ ಶ್ರೀ ಕ್ಷೇತ್ರ ಸೊಗಲಕ್ಕೆ ಹಾಗೂ ಯಾತ್ರಿಕ ಸ್ಥಳವಾದ ಎಲ್ಲಮ್ಮನ ಗುಡ್ಡಕ್ಕೆ ಹೆಚ್ಚಿನ ಪ್ರವಾಸಿಕರು ಓಡಾಡುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :-

ಅ) 31-3-1976 ರಂದು ಈ ರಸ್ತೆಯನ್ನು ಮಲಪ್ರಭಾ ಪ್ರಾಧಿಕಾರದಿಂದ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲಾಗಿದೆ. ಹಸ್ತಾಂತರಿಸುವಾಗ ಡಾಂಬರೀಕರಣವಾಗಿದ್ದಿತು.